## ಒಂದನೇ ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ

## ಸಿ ಸಿ ಸಂಖ್ಯೆ 08/2026

ಚಾಸಾ 4   ಪ್ರಾಸಾ 4

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ ಲೋಕೇಶ್ |
| ತಂದೆಯ ಹೆಸರು | : | ಪೆರುಮಾಳ್ |
| ವಯಸ್ಸು | : | 26 ವರ್ಷ |
| ಉದ್ಯೋಗ | : | ಚಾಲಕ |
| ವಾಸ ಸ್ಥಳ | : | ಕೆಂಪಯ್ಯನ ಹಟ್ಟಿ ಗ್ರಾಮ |

ದಿನಾಂಕ 06.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ – ಮಾನ್ಯ ಸಸಅ ರವರಿಂದ

ಚಾಸಾ-1 ರಿಂದ 3 , ಚಾಸಾ-5 ಮತ್ತು ಚಾಸಾ -6 ರವರ ಪರಿಚಯ ನನಗೆ ಇರುತ್ತದೆ. ಆರೋಪಿತರ ಪರಿಚಯ ನನಗೆ ಇರುತ್ತದೆ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದು ಸ್ಥಳ ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ನಾನು ದಿಃ28.11.2025ರಂದು ಕೆಂಪಯ್ಯನ ಹಟ್ಟಿ ಗ್ರಾಮದ ಶ್ರೀ ಪಟ್ಟ ತುಳಸಿಯಮ್ಮನ್ ದೇವಸ್ಥಾನದ ಬಳಿ ಸದರಿ ದೇವಸ್ಥಾನದಲ್ಲಿ ಹುಂಡಿ ಕಳ್ಳತನವಾಗಿರುವ ಬಗ್ಗೆ ಪೊಲೀಸರು ದೇವಸ್ಥಾನದ ಬಳಿ ಬಂದು ದೇವಸ್ಥಾನವನ್ನು ಪರಿಶೀಲಿಸಿ ವಿವರಗಳನ್ನು ಬರೆದುಕೊಂಡು ನನ್ನ ಸಹಿ ಪಡೆದುಕೊಂಡಿರುತ್ತಾರೆ.

ನಿಪಿ-2ಕ್ಕೆ ನನ್ನನ್ನು ಹೊರತುಪಡಿಸಿ ಚಾಸಾ-3 ಮತ್ತು 5 ರವರು ಸಹಿ ಮಾಡಿರುತ್ತಾರೆ. ಪೊಲೀಸರು ಸದರಿ ಕಾರ್ಯವನ್ನು ಬೆಳಿಗ್ಗೆ 7-15ರಿಂದ ಸಂಜೆಯವರೆಗೂ ಮಾಡಿರುತ್ತಾರೆ. ಪೊಲೀಸರು ಸ್ಥಳದಲ್ಲಿ ಫೋಟೋಗಳನ್ನು ತೆಗೆಸಿರುತ್ತಾರೆ. ಸಾಕ್ಷಿಯು ಫೋಟೋಗಳಲ್ಲಿ ತಮ್ಮನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲಾಗಿರುತ್ತದೆ.

**(ಈ ಹಂತದಲ್ಲಿ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾದ ಕಾರಣ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಗಿದೆ)**

**ಪಾಟೀ ಸವಾಲು : ಮಾನ್ಯ ಸ.ಸ.ಅ ರವರಿಂದ**

ದಿಃ28.11.2025 ರಂದು ಪೊಲೀಸರು ದೇವಸ್ಥಾನದ ಬಳಿ ಮಹಜರ್ ಗಾಗಿ ಬಂದು ನನ್ನನ್ನು ಮತ್ತು ಚಾಸಾ–3 ರವರನ್ನು ಪಂಚರಾಗಲು ಕೋರಿಕೊಂಡರು ಎಂದರೆ ಸರಿ . ಅದಕ್ಕೆ ನಾವು ಒಪ್ಪಿದ ಮೇರೆಗೆ ನಮಗೆ ನೋಟೀಸ್ ಜಾರಿ ಮಾಡಿದರು ಎಂದರೆ ಸರಿ . ನಂತರ ಚಾಸಾ–1 ರವರು ಹುಂಡಿ ಕಳ್ಳತನವಾದ ಸ್ಥಳವನುನ ತೋರಿಸಿಕೊಟ್ಟರು ಎಂದರೆ ಸರಿ . ನಂತರ ಪೊಲೀಸರು ನನ್ನ ಹಾಗೂ ಚಾಸಾ–3 ರವರ ಸಮಕ್ಷಮ ಬೆಳಿಗ್ಗೆ 10–30 ರಿಂದ 11–15ರವರೆಗೆ ಮಹಜರ್ ಕ್ರಮ ಜರುಗಿಸಿದರು ಎಂದರೆ ಸರಿ . ಆ ಸಮಯದಲ್ಲಿ ನಾನು, ಚಾಸಾ–1 ಮತ್ತು 3 ರವರು ಸಹಿ ಮಾಡಿರುತ್ತೇವೆ ಎಂದರೆ ಸರಿ .

**ಪಾಟೀ ಸವಾಲುಃ ಶ್ರೀ ಎಂ.ಎನ್. ಆರೋಪಿ ಪರ ವಕೀಲರಿಂದ**

ನಾನು ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಚಾಲಕನಾಗಿ ನಮ್ಮ ಗ್ರಾಮದಲ್ಲಿ ಕೆಲಸ ಮಾಡುತ್ತೇನೆ. ನಿಪಿ-2 ರ ಕಾಲದಲ್ಲಿ ಪಂಚರಾಗಿ ಬರಲು ನನಗೆ ಕರೆ ಮಾಡಿ ನಂತರ ನೋಟೀಸು ನೀಡಿರುತ್ತಾರೆ. ನಿಪಿ-2ನ್ನು ಪೊಲೀಸರು ಬೆರಳಚ್ಚು ಮಾಡಿರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. ನಿಪಿ-2 ರ ಅಂಶಗಳನ್ನು ಪೊಲೀಸರಿಗೆ ನಾವು ತಿಳಿಸಿರುತ್ತೇವೆ. ನಿಪಿ-2ನ್ನು ರಾಮಾಪುರ ಪೊಲೀಸ್ ಠಾಣೆ ಯಲ್ಲಿ ಮುದ್ರಿಸಿರುತ್ತಾರೆ. ನಂತರ ಪೊಲೀಸರು ನಿಪಿ-2ನ್ನು ಘಟನಾ ಸ್ಥಳಕ್ಕೆ ತೆಗೆದುಕೊಂಡು ಬಂದಿದ್ದು ಆಗ ನಾನು ಸಹಿ ಮಾಡಿರುತ್ತೇನೆ. ಪೊಲೀಸರು ನಮ್ಮ ಸಮಕ್ಷಮ ಬೆರಳಚ್ಚು ಮಾಡಿರುವುದನ್ನು ನಾನು ಓದಿರುತ್ತೇನೆ. ನಾನು ನಿಪಿ-2 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,
(ಎಂ. ರಂಜಿತ್ ಕುಮಾರ್)

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಕೊಳ್ಳೇಗಾಲ.